ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎ.ಟಿ.ಜಯಕುಮಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಾವೇರಿ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:**
1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/7352/2014/ ಸನಿಕಾಸ-1, ದಿನಾಂಕ:20.07.2016
2. ಸಹಾಯಕ ನಿಬಂಧಕರು, ಕಾನೂನು ಅಭಿಪ್ರಾಯ-1 ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/7352/2014/ ಎಆರ್‌ಎಲ್‌ಓ-1, ದಿನಾಂಕ: 22.08.2016.

****

**ಪ್ರಸ್ತಾವನೆ:**

ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಬೆಂಗಳೂರು ರವರ ದಿನಾಂಕ: 01.05.2011ರ ಪತ್ರದ ಮೇರೆಗೆ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ ಕೋಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬಿ.ಪಿ.ಎಲ್. ಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಅರ್ಹ ಮಹಿಳಾ ಫಲಾನುಭವಿಗಳಿಗೆ ನಿವೇಶನ ಹಂಚುವ ಬಗ್ಗೆ ದಿನಾಂಕ: 02.10.2012 ರಂದು ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಯಾದಿಯನ್ನು ಅಂತಿಮಗೊಳಿಸಿದ್ದು, ಅದರಲ್ಲಿ 3ನೇ ಎದುರುದಾರರು ತಮ್ಮ ಪ್ರಭಾವ ಬಳಸಿ 1 ಮತ್ತು 2ನೇ ಎದುರುದಾರರೊಡನೆ ಶಾಮೀಲಾಗಿ ಮಹಿಳಾ ಫಲಾನುಭವಿಯ ಬದಲಾಗಿ, ತಮ್ಮ ಸಹೋದರ ಶ್ರೀ .ಸಂಜೀವ ಬಸವಂತಪ್ಪ ಅಂಗಡಿಯವರಿಗೆ ಫಲಾನುಭವಿಗಳ ಪಟ್ಟಿಯ ಕ್ರಮ ಸಂಖ್ಯೆ: 37 ರಲ್ಲಿ ಒಂದು ನಿವೇಶನ ಮಂಜೂರು

ಮಾಡಿದ್ದು, ಸದರಿ ಶ್ರೀ ಸಂಜೀವ ಅಂಗಡಿ ಹಾಗೂ 3ನೇ ಎದುರುದಾರರು ಒಟ್ಟು ಕುಟುಂಬದಲ್ಲಿದ್ದು, ಸುಮಾರು 10 ಗುಮಟೆಯಲ್ಲಿ ಒಂದು ದೊಡ್ಡ ಮನೆಯಿದ್ದು, ಅವರು ಕಡು ಬಡವರಾಗಿರುವುದಿಲ್ಲ. ಮುಖ್ಯವಾಗಿ ಮಹಿಳೆಯರಿಗೆ ನೀಡುವ ನಿವೇಶನವನ್ನು ಸದರಿ ಶ್ರೀ ಸಂಜೀವ ಅಂಗಡಿಯವರಿಗೆ ಕಾನೂನುಬಾಹಿರವಾಗಿ ಮಂಜೂರು ಮಾಡಿ, ಎದುರುದಾರರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು, ಆರೋಪಿಸಿ, ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಹಾವೇರಿ ತಾಲ್ಲೂಕಿನ ಕೋಳೂರು ಅಂಚೆ ಗಣಜೂರಿನ ನಿವಾಸಿಯಾದ ಶ್ರೀ ಬಸವರಾಜ್ ಚಂದ್ರಪ್ಪ ಗಡೇಕರ್, ಇವರು ನೀಡಿದ್ದ ದೂರಿನ ಬಗ್ಗೆ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ಹಾವೇರಿ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಇವರಿಂದ ವರದಿಯನ್ನು ಪಡೆಯಲಾಗಿರುತ್ತದೆಂದು ತಿಳಿಸಲಾಗಿರುತ್ತದೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ಎದುರುದಾರರ ಸಂಖ್ಯೆ |
|---|---|---|
| 1. | ವಿಜಯಲಕ್ಷ್ಮೀ ಕೋಳಿವಾಡ ಹಿಂದಿನ ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ಕೋಳೂರು. | 1 |
| 2. | ತಿರುಪತಿ ಬೂಸಪ್ಪನವರ, ಗ್ರಾಮ ಪಂಚಾಯತಿ ಕಾರ್ಯದರ್ಶಿ. | 2 |
| 3. | ಮಹಾಂತೇಶ ಬಸವಂತಪ್ಪ ಅಂಗಡಿ, ಗ್ರಾಮ ಪಂಚಾಯತಿ ಸದಸ್ಯರು | 3 |

ದೂರುದಾರರಾದ ಶ್ರೀ ಬಸವರಾಜ್ ಚಂದ್ರಪ್ಪ ಗಡೇಕರ್, ಇವರು ನೀಡಿದ್ದ ದೂರಿನ ಬಗ್ಗೆ ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ನೀಡಿರುವ ವರದಿಯಲ್ಲಿ ಈ ಕೆಳಕಂಡ ಅಂಶ ಕಂಡು ಬಂದಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ವರದಿ ಮಾಡಲಾಗಿರುತ್ತದೆ.

"ಶ್ರೀ ಸಂಜೀವ ಅಂಗಡಿರವರು 3ನೇ ಎದುರುದಾರರಾದ ಶ್ರೀ ಮಹಾಂತೇಶ ಬಸವಂತಪ್ಪ ಅಂಗಡಿ, ಸಹೋದರರಾಗಿದ್ದು, ಅವರು ಅವಿವಾಹಿತರಾಗಿರುವುದರಿಂದ, ಅವರನ್ನು ಫಲಾನುಭವಿಯೆಂದು ಗ್ರಾಮಸಭೆಯಲ್ಲಿ ಅಂತಿಮಗೊಳಿಸಿ ಮಹಿಳೆಯ ಬದಲಾಗಿ ಅವರಿಗೆ ನಿವೇಶನವನ್ನು ಸರ್ಕಾರದ ನಿಯಮಗಳ ಪ್ರಕಾರ ಕೊಡಲಾಗಿದ್ದು, ರಾಜೀವ್ ಗಾಂಧಿ ವಸತಿ

ನಿಗಮ ನಿಯಮಿತ, ಬೆಂಗಳೂರು ರವರಿಂದ ಹಕ್ಕು ಪತ್ರವನ್ನು ಪಡೆದು ಅವರಿಗೆ ವಿತರಿಸಲಾಗಿದೆ. ಸದರಿ ಶ್ರೀ ಸಂಜೀವ ಅಂಗಡಿಯವರಿಗೆ 3 ಜನ ಸಹೋದರರಿದ್ದು, ಅವರ ಪಡಿತರ ಚೀಟಿಯನ್ನು ಪರಿಶೀಲಿಸಲಾಗಿ, ಅವರು ಒಟ್ಟು ಕುಟುಂಬದಲ್ಲಿರದೇ, ಪ್ರತ್ಯೇಕ ಪಡಿತರ ಚೀಟಿಯನ್ನು ಹೊಂದಿದ್ದು, ಸದರಿ ಸಂಜೀವ ಅಂಗಡಿರವರು ತನ್ನ ಇನ್ನೊಬ್ಬ ಸಹೋದರ ಶ್ರೀ ವೀರಭದ್ರಪ್ಪ ಅಂಗಡಿಯವರ ಮನೆಯಲ್ಲಿ ವಾಸವಾಗಿದ್ದು, ಅವರ ಹೆಸರು ಪಡಿತರ ಚೀಟಿಯಲ್ಲಿದ್ದು, 3ನೇ ಎದುರುದಾರರು ಅವರೊಡನೆ ವಾಸವಾಗಿರುವುದಿಲ್ಲ, 3ನೇ ಜನ ಸಹೋದರರು ಅವರ ಅಜ್ಜ ಶ್ರೀ ನಂಜಪ್ಪ, ಮೈಲಾರ ರವರ ಹೆಸರಿನಲಿರುವ 3 ಪ್ರತ್ಯೇಕ ಮನೆಗಳಲ್ಲಿ ವಾಸವಾಗಿದ್ದು, ಶ್ರೀ ಸಂಜೀವ ಅಂಗಡಿರವರ ವಾರ್ಷಿಕ ಆದಾಯವು ರೂ. 11,000/-ವಿದ್ದು, ಅವರು ಗಣಜೂರು ಗ್ರಾಮದಲ್ಲಿ ಯಾವುದೇ ಜಮೀನು ಹೊಂದಿರುವುದಿಲ್ಲವೆಂದು ಗ್ರಾಮ ಲೆಕ್ಕಾಧಿಕಾರಿಯು ವರದಿ ನೀಡಿದ್ದು, ಸದರಿ ಶ್ರೀ ಸಂಜೀವ ಅಂಗಡಿರವರು ಪ್ರತ್ಯೇಕ ಮನೆಯಲ್ಲಿ ವಾಸವಾಗಿದ್ದು, ಪ್ರತ್ಯೇಕ ಪಡಿತರ ಚೀಟಿಯನ್ನು ಪಡೆದಿದ್ದು, ಕಾರಣ ಸರ್ಕಾರದ ನಿಯಮಗಳನ್ವಯ, ಶ್ರೀ ಸಂಜೀವ ಬಸವಂತಪ್ಪ ಅಂಗಡಿಯವರಿಗೆ ನಿವೇಶನವನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ."

ತನಿಖಾ ವರದಿಯನ್ನು ಪರಿಶೀಲಿಸಲಾಗಿ, ಫಲಾನುಭವಿಗಳ ಪಟ್ಟಿ ಮತ್ತು ಸರ್ಕಾರದ ಸುತ್ತೋಲೆಗಳನ್ನು ಸರಿಯಾದ ರೀತಿ ಪರಿಶೀಲನೆ ಮಾಡದೆ ಆಯ್ಕೆ ಪಟ್ಟಿಯ ಅನುಮೋದನೆ ನೀಡಿರುವುದರಿಂದ, ಹಾವೇರಿ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ ಎ.ಟಿ.ಜಯಕುಮಾರ್, ಇವರನ್ನು 4ನೇ ಎದುರುದಾರರನ್ನಾಗಿ ಸೇರ್ಪಡಿಸಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ವರದಿಸಲಾಗಿರುತ್ತದೆ.

ಕಡತ ಮತ್ತು ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ ಎಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ವರದಿಸಲಾಗಿರುತ್ತದೆ.

1. ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಸುತ್ತೋಲೆ ಸಂಖ್ಯೆ: ಎಂಡಿಆರ್‌ಜಿಆರ್‌ಹೆಚ್‌ಸಿಎಲ್ 04 ಹೆಚ್‌ಎಎಸ್ 01 2011 ದಿನಾಂಕ: 10.05.2011ರ ಪ್ರಕಾರ ನಿವೇಶನಗಳನ್ನು ಕಡ್ಡಾಯವಾಗಿ ಮಹಿಳೆಯರಿಗಗ ಅಂದರೆ, ಅಂಗವಿಲರು, ಮಾಜಿ ಸೈನಿಕರು, ವಿದುರರು ಮತ್ತು ಹಿರಿಯ ನಾಗರೀಕರನ್ನು ಹೊರತುಪಡಿಸಿ, ಹಂಚಿಕೆ ಮಾಡಬೇಕಾಗಿದ್ದು,
2. 3ನೇ ಎದುರುದಾರರು ಸಹೋದರ ಸಂಜೀವ ಅಂಗಡಿಯವರು ಅಂಗವಿಕಲನಲ್ಲದಿದ್ದರೂ, ಮಾಜಿ ಸೈನಿಕನಲ್ಲದಿದ್ದೂ, ವಿದುರನಲ್ಲದಿದ್ದರೂ ಮತ್ತು ಹಿರಿಯ ನಾಗರೀಕರಲ್ಲದಿದ್ದರೂ 3ನೇ

ಎದುರುದಾರರ ಸಹೋದರ ಶ್ರೀ ಸಂಜೀವ ಅಂಗಡಿಯವರನ್ನು ಕಾನೂನುಬಾಹಿರವಾಗಿ 1 ರಿಂದ 3ನೇ ಎದುರುದಾರರು ಗ್ರಾಮ ಸಭೆಯಲ್ಲಿ ಫಲಾನುಭವಿಯೆಂದು ಆಯ್ಕೆ ಮಾಡಿದ್ದಾರೆ.

3. ಶ್ರೀ ಸಂಜೀವ ಅಂಗಡಿರವರಿಗೆ ನಿವೇಶನವನ್ನು ಸರ್ಕಾರದ ನಿಯಮಗಳನ್ವಯ ಮಾಡಲಾಗಿದೆಯೆಂದು ತನಿಖಾಧಿಕಾರಿಗಳು ಕೊಟ್ಟ ವರದಿಯು ನಂಬಲರ್ಹವಲ್ಲ.
4. 1 ರಿಂದ 3ನೇ ಎದುರುದಾರರು ಕಾನೂನು ಬಾಹಿರವಾಗಿ 3ನೇ ಎದುರುದಾರರ ಸಹೋದರ ಶ್ರೀ ಸಂಜೀವ ಅಂಗಡಿಯವರನ್ನು ಫಲಾನುಭವಿಯೆಂದು ಆಯ್ಕೆ ಮಾಡಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.
5. ಒಂದೇ ಕುಟುಂಬದವರಾದ ಶ್ರೀ ಸಂಜೀವ ಬ ಅಂಗಡಿ, ಶ್ರೀಮತಿ ನಾಗರತ್ನ ಕೋಂ. ಜಗದೀಶ್ ಅಂಗಡಿ, ಶ್ರೀಮತಿ ಮುತ್ತಕ್ಕ ಕೋಂ. ವೀರಭದ್ರಪ್ಪ ಬ ಅಂಗಡಿ, ಮತ್ತು ಶ್ರೀಮತಿ ಜಯಮ್ಮ ಕೋಂ ಮಹಾಂತೇಶ್ ಬ ಅಂಗಡಿ ಎಂಬ ನಾಲ್ಕು ಜನರನ್ನು ಫಲಾನುಭವಿಗಳಾಗಿ ಆಯ್ಕೆ ಮಾಡಿ 3ನೇ ಎದುರುದಾರರು ಸ್ವಜನ ಪಕ್ಷಪಾತ ಮಾಡಿರುವುದು ಹಾಗೂ ಅದಕ್ಕೆ 1, 2 ಮತ್ತು 4ನೇ ಎದುರುದಾರರು ಸಹಕರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಅಧಿಕಾರಿಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು ಸಮಂಜಸ/ತೃಪ್ತಿಕರವಾಗಿಲ್ಲದೆ ಇರುವುದರಿಂದ, ಸದರಿ ಎದುರುದಾರರು 1, 2 ಮತ್ತು 4 ಅಧಿಕಾರಿಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸುವಂತೆ, ಹಾಗೂ 3ನೇ ಎದುರುದಾರರು ಶ್ರೀ ಮಹಾಂತೇಶಪ್ಪ ಬಸವಂತಪ್ಪ ಅಂಗಡಿ, ಗ್ರಾಮ ಪಂಚಾಯತಿ ಸದಸ್ಯರು, ಇವರು ಅಧಿಕಾರೇತರರಾಗಿರುವುದ್ದರಿಂದ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ, ಮಾನ್ಯ ಉಪಲೋಕಾಯುಕ್ತರು-1, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ಶಿಫಾರಸ್ಸು ಮಾಡಿರುತ್ತಾರೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ಎದುರುದಾರರ ಸಂಖ್ಯೆ: |
|---|---|---|
| 1. | ವಿಜಯಲಕ್ಷ್ಮೀ ಕೋಳಿವಾಡ ಹಿಂದಿನ ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ಕೋಳೂರು. | 1 |
| 2. | ತಿರುಪತಿ ಬೂಸಪ್ಪನವರ. ಗ್ರಾಮ ಪಂಚಾಯತಿ ಕಾರ್ಯದರ್ಶಿ. | 2 |
| 3. | ಎ.ಟಿ.ಜಯಕುಮಾರ್. ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಾವೇರಿ | 4 |

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಕಂಡು ಬರುತ್ತದೆ. ಆದುದರಿಂದ, ಮಾನ್ಯ ಉಪಲೋಕಾಯುಕ್ತರು, ತಮ್ಮ ವರದಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸಿನಂತೆ, ಒಟ್ಟು 4 ಅಧಿಕಾರಿ/ನೌಕರರುಗಳ ಪೈಕಿ ಅಧಿಕಾರೇತರರಾದ ಶ್ರೀ ಮಹಾಂತೇಶಪ್ಪ ಬಸವಂತಪ್ಪ ಅಂಗಡಿ, ಸದಸ್ಯರು ಕೋಳೂರು ಗ್ರಾಮ ಪಂಚಾಯತಿ, ಇವರ ವಿರುದ್ಧ ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ, ನಿರ್ದೇಶಕರು ಪಂಚಾಯತ್ ರಾಜ್-1, ಇವರನ್ನು ಕೋರಲಾಗಿರುತ್ತದೆ. ಇನ್ನುಳಿದ 3 ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು-1, ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ, ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು, ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲು, ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 173 ವಿಸೇಬಿ 2016 ಬೆಂಗಳೂರು ದಿನಾಂಕ:19-09-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ 3 ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು

1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ಎದುರುದಾರರ ಸಂಖ್ಯೆ |
|---|---|---|
| 1. | ವಿಜಯಲಕ್ಷ್ಮೀ ಕೋಳಿವಾಡ ಹಿಂದಿನ ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ಕೋಳೂರು. | 1 |
| 2. | ತಿರುಪತಿ ಬೂಸಪ್ಪನವರ. ಗ್ರಾಮ ಪಂಚಾಯತಿ ಕಾರ್ಯದರ್ಶಿ. | 2 |
| 3. | ಎ.ಟಿ.ಜಯಕುಮಾರ್. ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಾವೇರಿ | 4 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

19/9/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಹಾವೇರಿ.
4) ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5) ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಎ.ಆರ್.ಎಲ್.ಓ-1. ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
6) ಸಂಬಂಧಿಸಿದ ಅಧಿಕಾರಿಗಳಿಗೆ.(ಮು.ಕಾ.ನಿ.ಅ.ಜಿಪಂ. ಹಾವೇರಿ ಇವರ ಮುಖಾಂತರ)

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು. ಗಣಕ ಕೋಶ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.